A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮೇ 2026 ರ ಪರೀಕ್ಷೆ - 2

MAY 2026 EXAMINATION - 2

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : 01-K **CODE NO. : 01-K**

ವಿಷಯ : ಪ್ರಥಮ ಭಾಷೆ — ಕನ್ನಡ

Subject : First Language — KANNADA

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)
(Regular Fresh / Regular Repeater / Private Fresh / Private Repeater)

ದಿನಾಂಕ : 18. 05. 2026] **[ಗರಿಷ್ಠ ಅಂಕಗಳು : 100**

Date : 18. 05. 2026] **[Max. Marks : 100**

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I.	**ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**6 × 1 = 6**
1.	ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು (ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು (ಸಿ) ಅನುನಾಸಿಕಾಕ್ಷರಗಳು (ಡಿ) ಯೋಗವಾಹಗಳು *ಉತ್ತರ :* (ಸಿ) ಅನುನಾಸಿಕಾಕ್ಷರಗಳು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	'ಕಡುವೆಳ್ಪು' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಎ) ಲೋಪ ಸಂಧಿ (ಬಿ) ಸವರ್ಣದೀರ್ಘ ಸಂಧಿ (ಸಿ) ಆದೇಶ ಸಂಧಿ (ಡಿ) ಗುಣ ಸಂಧಿ ***ಉತ್ತರ :*** (ಸಿ) ಆದೇಶ ಸಂಧಿ	
3.	ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು (ಎ) ಉದ್ಧರಣ (ಬಿ) ವಾಕ್ಯವೇಷ್ಟನ (ಸಿ) ಆವರಣ (ಡಿ) ವಿವರಣಾತ್ಮಕ ***ಉತ್ತರ :*** (ಎ) ಉದ್ಧರಣ	
4.	'ಬರೆ' ಧಾತುವಿನ ವಿಧ್ಯರ್ಥಕ ರೂಪ (ಎ) ಬರೆಯನು (ಬಿ) ಬರೆಯಳು (ಸಿ) ಬರೆಯರು (ಡಿ) ಬರೆಯಲಿ ***ಉತ್ತರ :*** (ಡಿ) ಬರೆಯಲಿ	
5.	ಚತುರ್ಥೀ ವಿಭಕ್ತಿಯ ಕಾರಕಾರ್ಥವಿದು (ಎ) ಸಂಪ್ರದಾನ (ಬಿ) ಅಪಾದಾನ (ಸಿ) ಸಂಬಂಧ (ಡಿ) ಅಧಿಕರಣ ***ಉತ್ತರ :*** (ಎ) ಸಂಪ್ರದಾನ	
6.	'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಸೇರಿದೆ (ಎ) ದ್ವಿಗು ಸಮಾಸ (ಬಿ) ತತ್ಪುರುಷ ಸಮಾಸ (ಸಿ) ಕ್ರಿಯಾ ಸಮಾಸ (ಡಿ) ಗಮಕ ಸಮಾಸ ***ಉತ್ತರ :*** (ಬಿ) ಗಮಕ ಸಮಾಸ	
II.	**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**4 × 1 = 4**
7.	ವೈಶಾಖ : ಬೇಸಗೆ :: ದ್ಯೂತ : ..... ***ಉತ್ತರ :*** ಜೂಜು	
8.	ಪರ್ವತ : ರೂಢನಾಮ :: ವಿಜ್ಞಾನಿ : ..... ***ಉತ್ತರ :*** ಅನ್ವರ್ಥನಾಮ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
9.	ಮ್ಯಾಗ : ಮೇಲೆ :: ಸಕ್ಕಾರಿ : ..... ***ಉತ್ತರ :*** ಸಕ್ಕರೆ	
10.	ಬಳೆಗಾರ : ತದ್ಧಿತಾಂತನಾಮ :: ಚೆಲುವಿಕೆ : ..... ***ಉತ್ತರ :*** ತದ್ಧಿತಾಂತ ಭಾವನಾಮ	
III.	**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು** **(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**7 × 1 = 7**
11.	ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ? ***ಉತ್ತರ :*** ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ.	
12.	ಹುಲಿಗೆ ಪರಮಾನಂದವಾಗಲು ಕಾರಣವೇನು ? ***ಉತ್ತರ :*** ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.	
13.	ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ? ***ಉತ್ತರ :*** ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ 'ಚೇರಿಂಗ್ ಕ್ರಾಸ್'.	
14.	ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ? ***ಉತ್ತರ :*** ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ತನ್ನ ಸಹೋದರನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.	
15.	ಕುಂಪಣಿ ಸರಕಾರ ಯಾವ ಆದೇಶವನ್ನು ಹೊರಡಿಸಿತು ? ***ಉತ್ತರ :*** ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಆದೇಶವನ್ನು ಹೊರಡಿಸಿತು.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
16.	ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ? ***ಉತ್ತರ :*** ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಸಂಪತ್ತನ್ನು) ಬೇಡುವುದಕ್ಕಾಗಿ ಬಂದನು.	
17.	ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ? ***ಉತ್ತರ :*** ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.	
IV.	**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**	**10 × 2 = 20**
18.	ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು ? ***ಉತ್ತರ :*** ವ್ಯಾವಹಾರಿಕವೆಂದರೆ ಜೀವದ್ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದಕ್ಕೆ ಉದಾಹರಣೆ. ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲಾ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದ್ದು, ಈಗ ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿಲ್ಲ.	
19.	ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ? ***ಉತ್ತರ :*** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಡಲಾಯಿತು. ಇದರಿಂದ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ನಗರಪಾಲಿಕೆಗಳು ಹಾಗೂ ಗ್ರಾಮಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ ೧. ಗ್ರಾಮ ನೈರ್ಮಲೀಕರಣ ೨. ವೈದ್ಯಕೀಯಸಹಾಯ ೩. ವಿದ್ಯಾ ಪ್ರಚಾರ ೪. ನೀರಿನ ಸೌಕರ್ಯ ೫. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.	
20.	ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ? *ಉತ್ತರ :* ಲಂಡನ್ ನಗರದಲ್ಲಿನ ವೂಲವರ್ಥ ಎಂಬ ಸ್ಟೇಷನರಿ ಅಂಗಡಿ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ. ಇಲ್ಲಿ ಎಲ್ಲಾ ತರದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಹೀಗೆ ಎಲ್ಲಾ ತರದ ಸಾಮಾನುಗಳು ಇಲ್ಲಿ ದೊರೆಯುತ್ತವೆ.	
21.	ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ ? *ಉತ್ತರ :* ಸೋಮಶರ್ಮ ಮತ್ತು ಕಾಶ್ಯಪಿಯ ಮಕ್ಕಳಾದ ಅಗ್ನಿಭೂತಿ ವಾಯುಭೂತಿಯರು ತಂದೆತಾಯಿಯರ ಮಾತಿಗೆ ಕಿವಿಗೊಡದೆ, ಯಾವ ವಿದ್ಯೆಯನ್ನು ಕಲಿಯದೆ, ತಂದೆ ಕೂಡಿಟ್ಟ ಹಣವನ್ನು ಖರ್ಚು ಮಾಡುತ್ತ ಸಪ್ತವ್ಯಸನಗಳಿಗೆ ತುತ್ತಾಗಿದ್ದರು. ತಂದೆ ಸೋಮಶರ್ಮನ ಮರಣದ ನಂತರ ರಾಜನಾದ ಅತಿಬಳನು ಅಗ್ನಿಭೂತಿ ವಾಯುಭೂತಿಯರನ್ನು ಅರಮನೆಗೆ ಕರೆಸಿಕೊಂಡು ನೀವು ಯಾವ ಯಾವ ವಿದ್ಯೆಗಳನ್ನು ಬಲ್ಲಿರಿ ?	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಎಂದು ಕೇಳಿದಾಗ ಅವರು ತಲೆತಗ್ಗಿಸಿ ಕಣ್ಣೀರು ಹಾಕಿ, ನಾಚಿಕೆಯಿಂದ ಕಾಲಿನ ಬೆರಳುಗಳಿಂದ ನೆಲದ ಮೇಲೆ ಗೀರ ತೊಡಗಿದರು. ರಾಜಸಭೆಯಲ್ಲಿದ್ದವರೆಲ್ಲ ಇವರು ಮೂರ್ಖರು, ಯಾವ ವಿದ್ಯೆಯನ್ನು ಅರಿಯರು, ಸಪ್ತವ್ಯಸನದಲ್ಲಿ ಮುಳುಗಿರುವರು ಎಂದಾಗ ಹೇಳಿದಾಗ ರಾಜನು ಅವರನ್ನು ಮೂರ್ಖರೆಂದು ತೀರ್ಮಾನಿಸಿ ಅಲ್ಲಿಂದ ಹೊರಗೆ ಕಳುಹಿಸಿದನು.	
22.	ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?	
	ಉತ್ತರ :	
	ಕಾಲವೆಂಬ ಹಕ್ಕಿಯ ಯುಗ ಯುಗಗಳ ಹಣೆಬರೆಹವನ್ನು ಅಳಿಸಿ ಹಾಕಿ ಹೊಸತನದ ಹಣೆಬರೆಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಭಾಗ್ಯವನ್ನು ತೆರೆದುಕೊಟ್ಟಿದೆ. ರೆಕ್ಕೆಯ ಬೀಸುವುದರ ಮೂಲಕ ಹೊಸ ಚೈತನ್ಯವನ್ನು ನೀಡಿ ಹೊಸ ಪೀಳಿಗೆಯ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಭೂಮಂಡಲದ ಮೇಲಿನ ಜೀವಿಗಳಿಗೆ ಶುಭಹಾರೈಸುತ್ತಿದೆ ಎಂದು ಕವಿ ಹೇಳಿದ್ದಾರೆ.	
23.	ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?	
	ಉತ್ತರ :	
	೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಬ್ರಿಟಿಷ್ ಸರ್ಕಾರ 'ನಿಶ್ಶಸ್ತ್ರೀಕರಣ ಕಾಯ್ದೆ'ಯನ್ನು ಜಾರಿ ಮಾಡಿತು. ಈ ಕಾಯ್ದೆಯ ಪ್ರಕಾರ ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಆಯುಧಗಳನ್ನು ಒಪ್ಪಿಸಿದರೆ ತಮ್ಮ ಮೂಲ ಕಸುಬಾದ ಬೇಟೆಗಾರಿಕೆಗೆ ತೊಂದರೆಯಾಗುತ್ತದೆ ಎಂದು ತಿಳಿದು ಈ ಆದೇಶವನ್ನು ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ಜೊತೆಗೂಡಿ ತಮ್ಮ ಜೀವನದ ಆಧಾರವಾಗಿರುವ ಆಯುಧಗಳನ್ನು ಕೊಡಲು ಒಪ್ಪದೆ ಬ್ರಿಟಿಷರ ವಿರುದ್ಧ ದಂಗೆ ಎದ್ದರು.	
24.	ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯಲು ಕಾರಣವೇನು ?	
	ಉತ್ತರ :	
	ಎಲ್ಲಾ ಮಕ್ಕಳು ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು. ಆದರೆ ಹನ್ನೆರಡು ವರ್ಷದ ಬಾಲಕ ಭಗತ್‌ಸಿಂಗ್ ಮಾತ್ರ ಮನೆಗೆ ಬಂದಿರಲಿಲ್ಲ. ಅವನ ತಂದೆ ತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಗಿತ್ತು. ತಡವಾಗಿ ಮನೆಗೆ ಬಂದ ಭಗತ್‌ಸಿಂಗ್‌ನನ್ನು ಕಂಡ ಅವನ ತಂಗಿ 'ವೀರಾಜಿ ಬಂದ' ಎಂದು ಕೂಗಿಕೊಂಡಳು. ಕತ್ತಲಾದರೂ ಮನೆಗೆ ಬಾರದೇ ಇದ್ದ ಮಗ ತಡವಾಗಿ ಬಂದುದನ್ನು ಕಂಡು ತಾಯಿ ಓಡಿ ಬಂದು ಮಗನನ್ನು ಬಿಗಿಯಾಗಿ ಅಪ್ಪಿದಳು. ಸಂತೋಷದಿಂದ ಆಕೆಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯಿತು.	
25.	'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?	
	ಉತ್ತರ :	
	ಗಾಂಧೀಜಿಯವರು ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಪುಸ್ತಕವನ್ನು ಓದಲು ಪ್ರಾರಂಭಿಸಿದಾಗ ಅದನ್ನು ಕೆಳಗಿಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. 'ಸರ್ವೋದಯ' ಎಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದರು. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮಜೀವಿ, ಉಳುವವನ, ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ ಎಂಬ ಸಿದ್ಧಾಂತಗಳನ್ನು 'ಅನ್‌ಟು ದಿಸ್ ಲಾಸ್ಟ್' ಪುಸ್ತಕದಿಂದ ತಿಳಿದುಕೊಂಡರು.	
26.	ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಭಿಪ್ರಾಯವನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾಳೆ ? ***ಉತ್ತರ :*** ಬಲ್ಲವರು ಅಂದರೆ ಜ್ಞಾನಿಗಳ ಸಂಗವನ್ನು ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ. ಅರಿಯದವರ ಅಂದರೆ ಅಜ್ಞಾನಿಗಳ ಸಂಗವ ಮಾಡಿದರೆ ಕಲ್ಲನ್ನು ಹೊಡೆದು ಬೆಂಕಿಯನ್ನು ಪಡೆದಂತೆ ಅಪಾಯಕಾರಿಯಾಗಿರುತ್ತದೆ. ಶರಣರ ಸಂಗವನ್ನು ಮಾಡಿದರೆ ಕರ್ಪೂರದ ಗಿರಿಯನ್ನು ಉರಿಯಕೊಂಬಂತಿರುತ್ತದೆ. ಶರಣರ ಸಂಗದಿಂದ ಎಲ್ಲಾ ಪಾಪಗಳು ನಾಶವಾಗುತ್ತವೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಇರುತ್ತದೆ ಎಂದು ಅಕ್ಕಮಹಾದೇವಿ ಜ್ಞಾನಿ-ಅಜ್ಞಾನಿಗಳ ಸಂಗದ ಬಗ್ಗೆ ತನ್ನ ವಚನದಲ್ಲಿ ತಿಳಿಸಿದ್ದಾಳೆ.	
27.	ರಾಜರ ಪ್ರಕೃತಿ ಹೇಗಿರುತ್ತದೆ ? ***ಉತ್ತರ :*** ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು, ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದಕ್ಕೆಲ್ಲ ಕಾರಣ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ರಾಜ್ಯಾಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ. ಹೀಗೆ ರಾಜರ ಪ್ರಕೃತಿ ಇರುತ್ತದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
V.	**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**	**2 × 3 = 6**
	ಜನ್ಮಸ್ಥಳ, ಕಾಲ	1 ಅಂಕ
	ಕೃತಿ, ಬಿರುದು / ಪ್ರಶಸ್ತಿ	1 ಅಂಕ
	ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ	1 ಅಂಕ
	ಒಟ್ಟು	3 ಅಂಕಗಳು
28.	*ದೇವನೂರ ಮಹಾದೇವ :*	
	ಉತ್ತರ :	
	ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾದ ದೇವನೂರ ಮಹಾದೇವ ಅವರು ಸಾ.ಶ. ೧೯೪೮ ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು. ಶ್ರೀಯುತರು 'ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ' ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ'ಗಳು ಲಭಿಸಿವೆ.	
29.	*ಪಂಪ :*	
	ಉತ್ತರ :	
	ಪಂಪ ಮಹಾಕವಿ ಸಾ.ಶ. ೯೦೨ ರಲ್ಲಿ ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಪಂಪ 'ಆದಿಪುರಾಣ, ವಿಕ್ರಮಾರ್ಜುನ ವಿಜಯಂ' (ಪಂಪಭಾರತ) ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ 'ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ' ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.	
VI.	**ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** ಪ್ರಸ್ತಾರ ಹಾಕುವುದು ಗಣ ವಿಭಾಗಿಸುವುದು ಛಂದಸ್ಸಿನ ಹೆಸರು ಬರೆಯುವುದು ಒಟ್ಟು	**1 × 3 = 3** 1 ಅಂಕ 1 ಅಂಕ 1 ಅಂಕ 3 ಅಂಕಗಳು
30.	ಗಗನವಬುಧಿಗೆ ಸರಿ ಸರೋವರ ಜಗಕೆ ಹಿತವನು ಶಕ್ರ ಮನುಜಾ ದಿಗಳ ಮಾತಾರೂಪು ಗೋವುಗಳಿದು ನಿಧಾನ ಮತ ಗಗನ|ವ ಬುಧಿಗೆ|ಸರಿಸ|ರೋವರ| = ೧೪ ಮಾತ್ರೆಗಳು ಜಗಕೆ|ಹಿತವನು|ಶಕ್ರ|ಮನುಜಾ| = ೧೪ ಮಾತ್ರೆಗಳು ದಿಗಳ|ಮಾತಾ|ರೂಪು|ಗೋವುಗ|ಳಿದು ನಿ|ಧಾನ ಮ|ತ| = ೨೩ ಮಾತ್ರೆಗಳು ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಭಾಮಿನಿಷಟ್ಪದಿ'ಯ ಲಕ್ಷ್ಯವಾಗಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
VII.	**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :**	**1 × 3 = 3**
	ಅಲಂಕಾರವನ್ನು ಹೆಸರಿಸುವುದು	1 ಅಂಕ
	ಲಕ್ಷಣ ಬರೆಯುವುದು	1 ಅಂಕ
	ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು	1 ಅಂಕ
	ಒಟ್ಟು	3 ಅಂಕಗಳು
31.	''ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು''	
	ಉತ್ತರ :	
	ಅಲಂಕಾರದ ಹೆಸರು : ಉಪಮಾಲಂಕಾರ	
	ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.	
	ಸಮನ್ವಯ : *ಉಪಮೇಯ* : ಗೀಜಗನ ಗೂಡುಗಳು	
	ಉಪಮಾನ : ತೊಟ್ಟಿಲು	
	ಉಪಮಾವಾಚಕ : ಅಂತೆ	
	ಸಮಾನಧರ್ಮ : ತೂಗಾಡುವುದು	
	ಇಲ್ಲಿ ಉಪಮೇಯವಾದ 'ಗೀಜಗನ ಗೂಡುಗಳನ್ನು' ಉಪಮಾನವಾದ 'ತೊಟ್ಟಿಲಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ತೂಗಾಡುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರ (ಪೂರ್ಣೋಪಮಾಲಂಕಾರ)ದ ಲಕ್ಷ್ಯವಾಗಿದೆ.	
VIII.	**ಗಾದೆಯನ್ನು ವಿಸ್ತರಿಸಿ ಬರೆಯುವುದು :**	**1 × 3 = 3**
	ಗಾದೆಯ ಮಹತ್ತ್ವದ ವಿವರಣೆ	1 ಅಂಕ
	ಅರ್ಥ ವಿವರಣೆ	1 ಅಂಕ
	ಭಾಷಾಶೈಲಿಗೆ–ಪದಬಂಧಗಳಿಗೆ	1 ಅಂಕ
	ಒಟ್ಟು	3 ಅಂಕಗಳು
32.	ತಾಳಿದವನು ಬಾಳಿಯಾನು.	
	ಅಥವಾ	
	ಬೆಳೆಯುವ ಸಿರಿ ಮೊಳಕೆಯಲ್ಲಿ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
IX.	**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**	**6 × 3 = 18**
	ಕರ್ತೃ, ಆಕರ ಮತ್ತು ಪಠ್ಯದ ಹೆಸರು	1 ಅಂಕ
	ಸಂದರ್ಭದ ವಿವರಣೆ	1 ಅಂಕ
	ಸ್ವಾರಸ್ಯ ಮತ್ತು ಶೈಲಿ	1 ಅಂಕ
	ಒಟ್ಟು	3 ಅಂಕಗಳು
33.	''ಹುಲಿ ಈಗ ಎಷ್ಟು ಹಸಿದಿರಬೇಕು.''	
	ಉತ್ತರ :	
	ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ.ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದು 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ಶಾನುಭೋಗರು 'ಕುಡಿದ ನೀರು ಅಲುಗದ ಹಾಗೆ' ಎನ್ನಲಾಗದಿದ್ದರೂ ಹುಲಿಯಿಂದ ತಪ್ಪಿಸಿಕೊಂಡು ಜೀವಸಹಿತ ಮನೆ ಸೇರಿಕೊಂಡು. ರಸದೂಟವನ್ನು ಮಾಡುವಾಗ ಅನಂತ ವಾತ್ಸಲ್ಯದಿಂದ ತನ್ನ ಪ್ರಾಣ ಕಾಪಾಡಿದ ಖಿರ್ದಿ ಪುಸ್ತಕವನ್ನು ನೋಡುತ್ತಾರೆ. ಹಸಿದ ಹುಲಿಯ ಬಗ್ಗೆ ಯೋಚನೆ ಮಾಡಿದಾಗ ಅವರ ವದನಾರವಿಂದದಲ್ಲಿ ಮುಗುಳುನಗೆ ಮೂಡುತ್ತದೆ ಈ ಸಂದರ್ಭದಲ್ಲಿ ಶಾನುಭೋಗರ ಮನಸ್ಸಿನಲ್ಲಿ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : ಪರಿಸರ ಸಮತೋಲನದಲ್ಲಿ ಒಂದು ಪ್ರಾಣಿ ಮತ್ತೊಂದನ್ನು ಅವಲಂಬಿಸುವುದು ಅನಿವಾರ್ಯವಾದರೂ ಸಾವಿನಿಂದ ಪಾರಾದ ಸಂತಸ, ಹುಲಿಯ ಧರ್ಮಶ್ರದ್ಧೆಯ ಬಗ್ಗೆ ಮೆಚ್ಚುಗೆ, ಹಸಿದ ಹುಲಿಯ ಬಗೆಗಿರುವ ಕಾಳಜಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.	
34.	''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು.''	
	ಉತ್ತರ :	
	ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ಸರ್ ಎಂ. ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಸಲ್ಲಿಸುವಾಗ ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿ ಯಶಸ್ವಿಯಾದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಮೇಲಿನ ಮಾತನ್ನು ಹೇಳಿದ್ದಾರೆ.	
	ಸ್ವಾರಸ್ಯ : ಸರ್ ಎಂ. ವಿಶ್ವೇಶ್ವರಯ್ಯ ಅವರಲ್ಲಿದ್ದ ಕಾರ್ಯದಕ್ಷತೆ ಬುದ್ಧಿಶಕ್ತಿ, ಅನ್ವೇಷಣಾ ಸಾಮರ್ಥ್ಯಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.	
35.	''ಅಮ್ಮಾ, ನಾನೋರ್ವ ಡಾಕ್ಟರ್. ನಾನು ಆಕೆಯನ್ನು ಪರೀಕ್ಷಿಸಲೇ ?''	
	ಉತ್ತರ :	
	ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್‌ರವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ರಾಹಿಲನು ತನ್ನ ರಕ್ಷಣೆಗಾಗಿ ಮುದುಕಿಯ ಮನೆಯೊಳಗೆ ಪ್ರವೇಶಿಸಿದಾಗ ಹೆಂಗಸೊಬ್ಬಳ ಆರ್ತನಾದ ಕೇಳಿ ಬರುತ್ತದೆ. ಆಗ ರಾಹಿಲನು ಮುದುಕಿಯನ್ನು ಯಾರಮ್ಮಾ ಅದು ? ಏನಾಗಿದೆ ? ಎಂದಾಗ ಮುದುಕಿಯು ನನ್ನ ಸೊಸೆ ಹೆರಿಗೆಯ ಬೇನೆ ತಿನ್ನುತ್ತಿದ್ದಾಳೆ. ನನ್ನ ಹುಡುಗಿಗೊಮ್ಮೆ ಹೆರಿಗೆಯಾದರೆ ಸಾಕಾಗಿತ್ತು ಎಂದು ಹೇಳಿದಾಗ ರಾಹಿಲನು ಮುದುಕಿಗೆ ಈ ಮೇಲಿನ ಮಾತನ್ನು ಹೇಳುತ್ತಾನೆ.	
	ಸ್ವಾರಸ್ಯ : ತನ್ನ ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಅದನ್ನು ಮರೆತು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಮುದುಕಿಯ ಸೊಸೆಗೆ ಹೆರಿಗೆ ಮಾಡಿಸಲು ಮುಂದಾಗುವ ರಾಹಿಲನ ವೈದ್ಯ ವೃತ್ತಿಧರ್ಮ, ಮಾನವೀಯತೆ ಹಾಗೂ ಪರೋಪಕಾರ ಗುಣ ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿವೆ.	
36.	''ರೆಕ್ಕೆಗಳೆರಡೂ ಪಕ್ಕದಲುಂಟು''	
	ಉತ್ತರ :	
	ಆಯ್ಕೆ : ಪ್ರಸ್ತುತ ಸಾಲನ್ನು ದ.ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ಕವಿ ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸುತ್ತಾ ಕಾಲಪಕ್ಷಿಗೆ ಕರಿನರೆ ಬಣ್ಣದ ಪುಚ್ಚಗಳು, ಬಿಳಿಯ ಬಣ್ಣದ ಗರಿಗಳು, ಕೆಂಪಾದ ಹೊನ್ನಿನ ಬಣ್ಣದ ರೆಕ್ಕೆಗಳೆರಡೂ ಪಕ್ಕದಲ್ಲಿ ಇವೆ ಎಂದು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : ಕಾಲದ ಮೂರು ಅವಸ್ಥೆಗಳಾದ ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲಗಳನ್ನು ಬಣ್ಣದ ಹೋಲಿಕೆಯ ಮೂಲಕ ವರ್ಣಿಸಿರುವುದು ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿವೆ.	
37.	''ಪಾಂಡವರೊಳಿಱೆದು ಛಲಮನೆ ಮೆಱೆವೆಂ''	
	ಉತ್ತರ :	
	ಆಯ್ಕೆ : ಪ್ರಸ್ತುತ ಸಾಲನ್ನು ಕವಿ ರನ್ನ ಬರೆದ 'ಸಾಹಸ ಭೀಮವಿಜಯಂ' ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.	
	ಸಂದರ್ಭ : ಭೀಷ್ಮರು ತನ್ನ ಬಳಿ ಬಂದ ದುರ್ಯೋಧನನಿಗೆ ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಸಲಹೆ ನೀಡಿದಾಗ ನಾನು ಭೂಮಿಗಾಗಿ ಹೋರಾಡುತ್ತಿಲ್ಲ, ಈ ಭೂಮಿ ನನಗೆ ಪಾಳು ಭೂಮಿ. ನನ್ನ ಪ್ರಿಯ ಗೆಳೆಯ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಹಾಗೂ ಒಡಹುಟ್ಟಿದ ಸಹೋದರರ ಸಾವಿಗೆ ಕಾರಣರಾದ ಪಾಂಡವರನ್ನು ಕೊಂದು ಛಲವನ್ನೇ ಮೆರೆಯುತ್ತೇನೆ ಎಂದು ದುರ್ಯೋಧನನು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : ಭೀಷ್ಮರ ಸಲಹೆಯನ್ನು ತಿರಸ್ಕರಿಸಿ ಸಂಧಿಗೆ ಒಪ್ಪದೆ, ತನ್ನ ಶತ್ರುಗಳಾದ ಪಾಂಡವರೊಂದಿಗೆ ಯುದ್ಧ ಮಾಡಿಯೇ ತೀರಬೇಕೆಂಬ ಅವನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ನಿರೂಪಿತವಾಗಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.	
38.	''ಹಸುರು ಗದ್ದೆಯಾ ಬಯಲು;''	
	ಉತ್ತರ :	
	ಆಯ್ಕೆ : ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡ ಕವಿ ಕುವೆಂಪುರವರಿಗೆ ಆಗಸ, ಮುಗಿಲು, ಗದ್ದೆ, ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಎಲ್ಲವೂ ಹಸುರಾಗಿಯೇ ಗೋಚರಿಸುತ್ತದೆ. ಹೀಗೆ ಕವಿ ಹಸುರಿನಲ್ಲಿ ತಲ್ಲೀನರಾಗಿರುವುದನ್ನು ವರ್ಣಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : ಕುವೆಂಪು ಅವರ ಸ್ಥಳವಾದ ಕುಪ್ಪಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಹಸುರುಗಳೊಂದಿಗೆ ಹೊಂದಿದ್ದ ಸಂಬಂಧ, ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿ, ರಸಾಸ್ವಾದನೆ ಇತ್ಯಾದಿ ಅಂಶಗಳು ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿವೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
X.	**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :**	**1 × 4 = 4**
39.	ಕಲುಷಿತವಾದೀ	
	.....	
	.....	
	..... ಮುಟ್ಟೋಣ	
	ಅಥವಾ	
	ಮತಗಳೆಲ್ಲವೂ	
	.....	
	.....	
	..... ಬಿತ್ತೋಣ	
	ಉತ್ತರ :	
	ಕಲುಷಿತವಾದೀ ನದೀಜಲಗಳಿಗೆ	
	ಮುಂಗಾರಿನ ಮಳೆಯಾಗೋಣ	
	ಬರಡಾಗಿರುವೀ ಕಾಡುಮೇಡುಗಳ	
	ವಸಂತವಾಗುತ ಮುಟ್ಟೋಣ	
	ಅಥವಾ	
	ಮತಗಳೆಲ್ಲವೂ ಪಥಗಳು ಎನ್ನುವ	
	ಹೊಸ ಎಚ್ಚರದೊಳು ಬದುಕೋಣ	
	ಭಯ-ಸಂಶಯದೊಳು ಕಂದಿದ ಕಣ್ಣೊಳು	
	ನಾಳಿನ ಕನಸನು ಬಿತ್ತೋಣ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XI.	**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :**	**1 × 4 = 4**
	ವಿಷಯಾಂಶಕ್ಕೆ 3 ಅಂಕಗಳು ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ ಒಟ್ಟು 1 ಅಂಕ 4 ಅಂಕಗಳು	
40.	ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಜಿಪಂ ಕರೆಸಲಾಗಿ ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ***ಉತ್ತರ :*** ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆ ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನು ಬಾಲಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಪರಿಚಯಿಸಿರುವುದು ಲಕ್ಷ್ಮೀಶ ಕವಿ ಬರೆದ 'ವೀರಲವ' ಪದ್ಯದಲ್ಲಿ ಮನೋಜ್ಞವಾಗಿ ವ್ಯಕ್ತಗೊಂಡಿದೆ. ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ದೇಶದೇಶಗಳನ್ನು ಸುತ್ತಾಡಿ ವಾಲ್ಮೀಕಿ ಋಷಿಯ ಆಶ್ರಮಕ್ಕೆ ಬರುತ್ತದೆ. ತನ್ನ ಒಡನಾಡಿಗಳ ಜೊತೆಗೂಡಿ ಆಟವಾಡುತ್ತಿದ್ದ ಲವನು ಕುದುರೆಯನ್ನು ಕಂಡು ಇದು ಎಲ್ಲಿಯ ಕುದುರೆ, ಹೂತೋಟವನ್ನು ಪ್ರವೇಶಿಸಿ ತುಳಿದು ಹಾಳು ಮಾಡುತ್ತಿದೆ. ವಾಲ್ಮೀಕಿ ಮುನಿನಾಥನು ತೋಟವನ್ನು ಸಂರಕ್ಷಣೆ ಮಾಡಬೇಕೆಂದು ನನ್ನನ್ನು ನೇಮಿಸಿ ವರುಣಲೋಕಕ್ಕೆ ಹೋಗಿದ್ದಾರೆ. ವರುಣ ಲೋಕದಿಂದ ಬಂದ ನಂತರ ನನ್ನ ಮೇಲೆ ಕೋಪಗೊಳ್ಳುವರು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಎಂದು ಕುದುರೆಯ ಕಡೆಗೆ ನಡೆದು ಬಂದು ಅದರ ನೆತ್ತಿಯ ಮೇಲಿದ್ದ ಪಟ್ಟದ ಲಿಖಿತವನ್ನು ನೋಡಿ ಓದಿಕೊಳ್ಳುತ್ತಿದ್ದನು. ಗುರುಗಳ ಮಾತನ್ನು ಪಾಲಿಸದೆ ಇದ್ದರೆ ಶಿಕ್ಷೆಗೆ ಗುರಿಯಾಗಬೇಕೆಂಬ ಭಯ, ಆತಂಕ, ಚಿಕ್ಕವರು, ಅಸಮರ್ಥರು ಎಂದು ಸುಮ್ಮನೆ ಕೂರದೆ ಧೈರ್ಯ ಸಾಹಸಗಳನ್ನು ಪ್ರದರ್ಶಿಸುವ ಬಾಲಸಹಜ ಕ್ಷಾತ್ರಗುಣ, ಎಂತಹ ಸವಾಲುಗಳು ಎದುರಾದರೂ ಅಂಜದೆ ದಿಟ್ಟತನದಿಂದ ಹೋರಾಡುವ ಗುಣ ಪ್ರಸ್ತುತ ಪದ್ಯಭಾಗದಲ್ಲಿ ಬರುವ ಉತ್ತಮ ಮೌಲ್ಯಗಳಾಗಿವೆ.	
XII.	**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**	**2 × 4 = 8**
	ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ	3 ಅಂಕಗಳು
	ಭಾಷಾಶೈಲಿಗೆ, ಪದಬಂಧಗಳಿಗೆ	1 ಅಂಕ
	ಒಟ್ಟು	4 ಅಂಕಗಳು
41.	ಶ್ರೀರಾಮನ ಆಗಮನದಿಂದ ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.	
	ಅಥವಾ	
	ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಗಾಗಿ ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಮಾಡಿಕೊಂಡ ಬಗೆಯನ್ನು ಸಂಗ್ರಹಿಸಿ ಬರೆಯಿರಿ.	
	ಉತ್ತರ :	
	ರಾಮಲಕ್ಷ್ಮಣರನ್ನು ಕಂಡ ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ. ರಾಮನ ಹತ್ತಿರಕ್ಕೆ ಬಂದು ಆತನ ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಳ್ಳುತ್ತಾಳೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ತನ್ನ ಮನದಾಸೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಡುತ್ತಾಳೆ. ರುಚಿಕರವಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ರಾಮನನ್ನು ಕಂಡ ನಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನು ಕೂಡ ನಿನ್ನ ಆದರದಿಂದ ನಾವು ಸುಖಿ, ನಿನಗೆ ನಾವು ಋಣಿ ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು, ತೃಷೆ ಹಿಂಗಿತೇ ? ನಾನೊಬ್ಬಳು ಬಡವಿ. ನನ್ನ ಮೇಲೆ ಮರುಕ ತಳೆದಿರಾ ಎನ್ನುತ್ತಾಳೆ. ಶ್ರೀರಾಮನು ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ. ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ. ನಿನ್ನ ಮನೆಯೇ ನಮ್ಮ ಮನೆ, ನೀನೇ ನಮ್ಮ ತಾಯಿಯಂತೆ ಎನ್ನುತ್ತಾನೆ. ಶಬರಿಯು ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದೆ. ಸಿದ್ಧರಾದ ಮತಂಗರ ವರ ಇಂದು ನನಗೆ ಫಲಿಸಿತು. ನಿಮ್ಮನ್ನು ಕಂಡ ಪುಣ್ಯ, ಗುರು ಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಲಭಿಸಿದೆ. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ. ಶ್ರೀರಾಮನು ನಿನ್ನ ಗುರುಗಳ ಮಹಿಮೆಯನ್ನು ಬಲ್ಲೆನು. ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿರುವ ಶುದ್ಧ ಪ್ರೇಮಮೂರ್ತಿ ನೀನು. ಈ ದಿನ ನಮಗೆ ಸುದಿನ ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ. ಹೀಗೆ ಶ್ರೀರಾಮನ ದರ್ಶನದಿಂದ ಶಬರಿ ತನ್ನ ಮನದ ಚಿಂತೆಯನ್ನು ಹಿಂಗಿಸಿಕೊಂಡಳು. **ಅಥವಾ**	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸುತ್ತಾರೆ. ರಾಮನು ಗಿರಿವನಗಳನ್ನು ಕುರಿತು ಗಿರಿವನವೇ ಭೂಮಿಜಾತೆ, ಆತ್ಮಕಾಮ ಕಲ್ಪಲತೆ, ಚೆಲುವೆಯೂ ಆದ ಸೀತೆ ಎಲ್ಲಿದ್ದಾಳೆ ಹೇಳಿರಿ. ಆಕೆ ನನಗೆ ದೊರೆಯುವುದಿಲ್ಲವೆ ? ಅವಳು ಇರುವ ನೆಲೆ ನಿಮಗೆ ತಿಳಿದಿಲ್ಲವೆ ? ನನ್ನ ಹೃದಯದ ನೋವು, ಸಂಕಟ ನಾಶವಾಗುತ್ತಿಲ್ಲವಲ್ಲ. ಈ ಜಗವನ್ನು ಸುಡುತ್ತಿಲ್ಲವಲ್ಲ ಎಂದು ದುಃಖಿಸುತ್ತಾನೆ. ಆಗ ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನನ್ನು ಕುರಿತು ಅಣ್ಣ ತಾಳಿಕೋ, ಸೂರ್ಯನೇ ಕಾಂತಿಯನ್ನು ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು ? ರಾಮನೇ ಧೈರ್ಯವನ್ನು ಕಳೆದುಕೊಂಡರೆ ಜಗತ್ತಿಗೆ ಸ್ಥೈರ್ಯವನ್ನು ತುಂಬುವವರು ಯಾರು ? ಧೈರ್ಯವಾಗಿರು ಎಂದು ಸಮಾಧಾನಿಸುತ್ತಾನೆ. ಆಗ ರಾಮನು 'ಸೀತೆಯ ನೆನಪಿನ ಸೆಳೆತಕ್ಕೆ ನನ್ನ ಆತ್ಮ ಸಿಲುಕಿ, ನನ್ನ ಮನಸ್ಸಿಗೆ ಈ ಶೋಕದ ಉಲ್ಕೆ ಅನಿವಾರ್ಯವಾಗಿದೆ. ನೋಡು ಲಕ್ಷ್ಮಣ ತಪಸ್ವಿಗಳ ಬೀಡು ಇದನ್ನು ನೋಡಿ ಸೀತೆಯ ನೆನಪು ಮತ್ತೆ ಮರುಕಳಿಸುತ್ತಿದೆ.' ಎಂದನು. ಹೌದು ಅಣ್ಣ ನನಗೂ ಚಿತ್ರಕೂಟವೇ ನೆನಪಿಗೆ ಬರುತ್ತಿದೆ ಜೊತೆಯಲ್ಲಿ ಅತ್ತಿಗೆಯಿದ್ದ ಬಗೆ ಕಾಡುತಿದೆ. ನಾನು ಪಾಪಿ ಆಕೆಯನ್ನು ಒಂಟಿಯಾಗಿ ಬಿಟ್ಟು ಬಂದೆ. ಎನ್ನ ಅಹಂಕೃತಿಗೆ ಮನ್ನಣೆ ಕೊಟ್ಟೆ ಎಂದು ಹೇಳಿ ಲಕ್ಷ್ಮಣ ದುಃಖಿತನಾಗುತ್ತಾನೆ. ಆಗ ರಾಮನು ಮರುಗದಿರು ಲಕ್ಷ್ಮಣ, ಆದದ್ದು

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಆಯಿತು. ನಿಮ್ಮನ್ನು ಆ ದೈವ ಮರುಳು ಮಾಡಿತು ಈಗ ನಾವು ದನು ತೋರಿದ ದಾರಿಯಲ್ಲಿ ಬಂದಿದ್ದೇವೆಯೇ ? ಶಬರಿಯ ಆಶ್ರಮ ಇರಬಹುದೇ ? ನೋಡೋಣ ಬಾ ಎಂದು ಲಕ್ಷ್ಮಣನನ್ನು ಸಮಾಧಾನಪಡಿಸಿದನು.	
42.	ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.	
	ಅಥವಾ	
	ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ 'ಕೌರವೇಂದ್ರನ ಕೊಂದೆ ನೀನು' ಪದ್ಯದಲ್ಲಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.	
	ಉತ್ತರ :	
	ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಹೋಗಿ ಆತನು ಯುದ್ಧದಿಂದ ವಿಮುಖನಾಗುವಂತೆ ಮಾಡುತ್ತಾನೆ. ನಂತರ ಕೃಷ್ಣಸಂಧಾನವು ತಿರಸ್ಕೃತವಾದಾಗ ಕರ್ಣನನ್ನು ರಥದಲ್ಲಿ ಕೂರಿಸಿಕೊಂಡು ಜನ್ಮರಹಸ್ಯವನ್ನು ತಿಳಿಸಿ ಕೆಲವು ಆಮಿಷಗಳನ್ನು ಒಡ್ಡುತ್ತಾನೆ. ಕರ್ಣ ನಿಮಗೂ, ಯಾದವ, ಕೌರವರಿಗೂ ಭೇದವಿಲ್ಲ, ನೀನು ನಿಜವಾಗಿ ಮೇಧಿನಿಪತಿ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತ ಉಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ-ಸಹದೇವರಿಬ್ಬರು ಜನಿಸಿದರು. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು. ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿ ಎನಿಸುತ್ತದೆಯೇ ? ನೀನು ರಾಜನಾದರೆ ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು ಎದುರಿಗೆ ಮಾದ್ರ, ಮಾಗಧ, ಯಾದವಾದಿಗಳು ಇರುತ್ತಾರೆ. ಇವರ ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಶೋಭಿಸುವ ವಿಶೇಷ ಸೊಬಗನ್ನು ತೊರೆದು ದುರ್ಯೋಧನನು ಕರೆದಾಗ ಸ್ವಾಮಿ, ಅಪ್ಪಣೆ ಎಂದು ಹೇಳುವುದು ನಿನಗೆ ಕಷ್ಟವಾಗುವುದಿಲ್ಲವೇ ? ಎಂದು ಹೇಳುತ್ತಾನೆ. ಧರ್ಮರಕ್ಷಣೆಗಾಗಿ ಮುಂದಾದ ಕೃಷ್ಣನು ಪಾಂಡವರು ಧರ್ಮದ ಪರ ಇದ್ದುದರಿಂದ ಪಾಂಡವರಿಗೆ ಯಾವುದೇ ಅಪಾಯವಾಗಬಾರೆಂದು ನಿರ್ಧರಿಸಿ, ಕರ್ಣನಿಗೆ ಆತನ ಜನ್ಮರಸಹ್ಯವನ್ನು ತಿಳಿಸುವುದರೊಂದಿಗೆ ರಾಜನನ್ನಾಗಿ ಮಾಡುವ ಆಮಿಷಗಳನ್ನು ಒಡ್ಡುತ್ತಾನೆ.	
	ಅಥವಾ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಕೃಷ್ಣ ಸಂಧಾನವು ದುರ್ಯೋಧನನ ಹಠದಿಂದ ಮುರಿದು ಬಿದ್ದು ಯುದ್ಧ ಅನಿವಾರ್ಯವಾಗುತ್ತದೆ. ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಅಷ್ಟೇ ಅಲ್ಲದೆ ಪಾಂಡವರಲ್ಲಿ ನೀನೆ ಹಿರಿಯವನಾಗಿರುವುದರಿಂದ ಹಸ್ತಿನಾಪುರಕ್ಕೆ ನೀನು ಅಧಿಪತಿಯಾಗುವೆ ಎಂಬ ಆಮಿಗಳನ್ನು ಒಡ್ಡುತ್ತಾನೆ. ಕೃಷ್ಣನಿಂದ ಜನ್ಮರಹಸ್ಯವನ್ನು ತಿಳಿದಾಗ ಕರ್ಣನ ಕೊರಳ ಸೆರೆ ಹಿಗ್ಗಿದವು ಕಣ್ಣೀರು ಧಾರಾಕಾರವಾಗಿ ಸುರಿಯಲಾರಂಭಿಸಿತು. ದುರ್ಯೋಧನನಿಗೆ ಕೇಡಾಯಿತು ಎಂದು ಮನದೊಳಗೆ ಸಂಕಟಪಟ್ಟನು. ಹರಿಯ ಹಗೆತನ ಹೊಗೆ ತೋರದೆ ಸುಡದೆ ಬಿಡುವುದಿಲ್ಲ. ಕೃಷ್ಣನು ನನ್ನ ಜನ್ಮ ವೃತ್ತಾಂತವನ್ನು ತಿಳಿಸಿ ಕೊಂದನು. ಹೆಚ್ಚಿಗೆ ಹೇಳುವುದು ಇನ್ನೇನಿದೆ ಎಂದು ಚಿಂತಿಸುತ್ತ ಏನೂ ಮಾತನಾಡದೆ ಮೌನಿಯಾಗುತ್ತಾನೆ. ಏನನ್ನು ಉತ್ತರಿಸದ ಕರ್ಣನಿಗೆ ಕೃಷ್ಣನು ಏನಾದರೂ ಹೇಳು ಹುಚ್ಚುತನ ಮಾಡಬೇಡ. ನಾನು ನಿನಗೆ ಅಪದೆಸೆಯನ್ನು ಬಯಸುತ್ತಿಲ್ಲ ಎಂದಾಗ ಕರ್ಣನು ಕೃಷ್ಣನನ್ನು ಕುರಿತು, ಮರುಳು ಮಾಧವ ಮಹಿಯ ರಾಜ್ಯದ ಸಿರಿಗೆ ನಾನು ಸೋಲುವುದಿಲ್ಲ. ನನಗೆ ಪಾಂಡವರು, ಕೌರವರು ಸೇವಕರಾಗುವುದು ಇಷ್ಟವಿಲ್ಲ. ನನ್ನನ್ನು ಕಾಪಾಡಿದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ಅರ್ಪಿಸಬೇಕೆಂಬ ಭರದಲ್ಲಿದ್ದೆ. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ ಎಂದನು.

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ನಾಳಿನ ಸಮರದಲ್ಲಿ ನನ್ನ ಪರಾಕ್ರಮವನ್ನು ಪಾಂಡುವಿನ ಮಕ್ಕಳೊಂದಿಗೆ ತೋರಿಸುತ್ತೇನೆ. ನನ್ನ ಒಡೆಯನಿಗೋಸ್ಕರ ಈ ಶರೀರವನ್ನು ಅರ್ಪಿಸುತ್ತೇನೆ. ನಿನ್ನವರಾದ ಪಾಂಡವರ ಐವರನ್ನು ನೋಯಿಸುವುದಿಲ್ಲ. ಸೂರ್ಯನ ಮೇಲಾಣೆ ಎಂದು ತನ್ನ ನಿರ್ಧಾರ ಪ್ರಕಟಪಡಿಸುತ್ತಾನೆ. ಸ್ವಾಮಿ ನಿಷ್ಠೆಗೆ ಬದ್ಧನಾದ ಕರ್ಣನು ಕೃಷ್ಣನು ಒಡ್ಡಿದ ಯಾವುದೇ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾಗಿ ನೋವು ಸಂಕಟದಿಂದ ಬಳಲುತ್ತಾನೆ. ಉದಾತ್ತತೆಗೆ, ಕರುಣೆಗೆ, ಶೌರ್ಯಕ್ಕೆ, ದಾನಕ್ಕೆ ಹೆಸರಾಗಿದ್ದ ಕರ್ಣನ ವ್ಯಕ್ತಿತ್ವದ ಹಿರಿಮೆ ವ್ಯಕ್ತವಾಗಿದೆ.	
XIII.	**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**	**1 × 4 = 4 (2 + 2)**
43.	ಮಾನವ ಸೇವೆಯೇ ಮಾಧವನ ಸೇವೆ ಎಂಬುದಾಗಿ ತಿಳಿದಿರುವ ಅಂಗವಿಕಲರ, ಅನಾಥರ, ರೋಗಿಗಳ ಅದರಲ್ಲಿಯೂ ಮುಖ್ಯವಾಗಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯಲ್ಲಿ ತೃಪ್ತಿ ಕಾಣುತ್ತಿರುವ ಮಹಾನ್ ಸಮಾಜ ಸೇವಕರು ಬಾಬಾ ಆಮ್ಟೆಯವರು. ಇವರು ಮಹಾತ್ಮ ಗಾಂಧೀಜಿಯವರ ನಿಸ್ವಾರ್ಥ ಮನೋಭಾವ ಸೇವಾ ಬದುಕಿನಿಂದ ಬಹಳ ಪ್ರಭಾವಿತರಾದರು. ಅವರ ನಾಯಕತ್ವದಲ್ಲಿ ತೀವ್ರ ರೀತಿಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದುದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಸೇರಿದರು. ೧೯೪೨ ರ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಚಳುವಳಿಯಲ್ಲಿ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಸಕ್ರಿಯವಾಗಿ ಭಾಗವಹಿಸಿದರು. ಖಾದಿ ಧರಿಸಿದರು. ತಮ್ಮ ಪಾಲಿನ ಆಸ್ತಿಯನ್ನು ಬಡವರಿಗೆ ಹಂಚಿದರು. ತಮ್ಮ ವಕೀಲಿ ವೃತ್ತಿಯನ್ನು ಸ್ವಯಂ ಇಚ್ಛೆಯಿಂದ ಬಿಟ್ಟುಕೊಟ್ಟರು. ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತಾವು ಬಹಳವಾಗಿ ತೊಡಗಿಸಿಕೊಂಡರು.

ಆ ಕಾಲದಲ್ಲಿ ಕುಷ್ಠರೋಗದ ಬಗ್ಗೆ ಕಳಪೆ ಭಾವನೆ ಇತ್ತು. ಅದು ದೈವೀಶಾಪದಿಂದ ಬರುತ್ತದೆ. ಅದರಿಂದ ಮುಕ್ತಿಯೇ ಇಲ್ಲ. ಅದು ಎಂದೆಂದಿಗೂ ವಾಸಿಯಾಗದ ಖಾಯಿಲೆ. ಅವರ ಸಂಪರ್ಕಕ್ಕೆ ಬರುವ ಆರೋಗ್ಯವಂತರಿಗೂ ಆ ಖಾಯಿಲೆ ಅಂಟುತ್ತದೆ. ಇವೇ ಮೊದಲಾದವು ಜನರ ಮನಸ್ಸಿನಲ್ಲಿ ಗಾಢವಾಗಿ ಬೇರೂರಿದ್ದವು. ಕುಷ್ಠರೋಗಿಗಳನ್ನು ಜನರು ಅಸಹ್ಯ ರೀತಿಯಲ್ಲಿ ತುಂಬಾ ತಿರಸ್ಕಾರದಿಂದ ನೋಡುತ್ತಿದ್ದರು. ಈ ಭಯಂಕರ ರೋಗದಿಂದ ನರಳಿ ಸಾಯುವುದನ್ನು ಕಣ್ಣಾರೆ ಕಂಡ ಬಾಬಾ ಆಮ್ಟೆಯವರ ಹೃದಯ ಕರಗಿ ನೀರಾಯಿತು. 'ಆನಂದ ವನ' ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಗುಡಿಸಲು ಕಟ್ಟಿ ಅಲ್ಲಿಯೇ ತಮ್ಮ ಸಂಸಾರ ಸಮೇತ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆ ನಡೆಸಲು ಪ್ರಾರಂಭಿಸಿದರು. ಕುಷ್ಠರೋಗದ ಬಗ್ಗೆ, ಅದಕ್ಕೆ ಸಂಬಂಧಿಸಿದ ಚಿಕಿತ್ಸೆ ಹಾಗೂ ಶುಶ್ರೂಷೆಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ತಿಳಿದುಕೊಳ್ಳಲು ಕಲ್ಕತ್ತೆಯ ತರಬೇತಿ ಶಾಲೆಯನ್ನು ಸೇರಿ ಆ ಬಗ್ಗೆ ವಿಶೇಷ ತರಬೇತಿ ಪಡೆದರು. ವಾಪಸ್ಸಾದ ನಂತರ 'ಮಹಾರೋಗಿ ಸೇವಾ ಸಮಿತಿ'ಯನ್ನು ಸ್ಥಾಪಿಸಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯನ್ನು ತುಂಬಾ ವ್ಯವಸ್ಥಿತವಾಗಿ ಆರಂಭಿಸಿದರು.

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಪ್ರಶ್ನೆಗಳು : ಅ) ಬಾಬಾ ಆಮ್ಟೆ ಅವರು ಕುಷ್ಠರೋಗಿಗಳ ಚಿಕಿತ್ಸೆ ಹಾಗೂ ಶುಶ್ರೂಷೆಗೆ ಕೈಗೊಂಡ ಕ್ರಮಗಳಾವುವು ? ಆ) ಬಾಬಾ ಆಮ್ಟೆ ಅವರು ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾದ ಬಗೆಯನ್ನು ತಿಳಿಸಿ. *ಉತ್ತರ :* ಅ) ಕುಷ್ಠರೋಗದಿಂದ ಜನರು ನರಳಿ ಸಾಯುವುದನ್ನು ಕಣ್ಣಾರೆ ಕಂಡ ಬಾಬಾ ಆಮ್ಟೆಯವರು 'ಆನಂದ ವನ' ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಗುಡಿಸಲು ಕಟ್ಟಿ ಅಲ್ಲಿಯೇ ತಮ್ಮ ಸಂಸಾರ ಸಮೇತ ಕುಷ್ಠ ರೋಗಿಗಳ ಚಿಕಿತ್ಸೆ, ಶುಶ್ರೂಷೆ ನಡೆಸಲು ಪ್ರಾರಂಭಿಸಿದರು. ಕುಷ್ಠರೋಗ ಅದಕ್ಕೆ ಸಂಬಂಧಿಸಿದ ಚಿಕಿತ್ಸೆ ಹಾಗೂ ಶುಶ್ರೂಷೆಗಳ ಬಗ್ಗೆ ತಿಳಿದುಕೊಳ್ಳಲು ಕಲ್ಕತ್ತೆಯ ಶಾಲೆಯೊಂದರಿಂದ ವಿಶೇಷ ತರಬೇತಿ ಪಡೆದು ವಾಪಸ್ಸಾದ ನಂತರ 'ಮಹಾರೋಗಿ ಸೇವಾ ಸಮಿತಿ'ಯನ್ನು ಸ್ಥಾಪಿಸಿ ಕುಷ್ಠ ರೋಗಿಗಳ ಚಿಕಿತ್ಸೆ, ಶುಶ್ರೂಷೆಯನ್ನು ವ್ಯವಸ್ಥಿತವಾಗಿ ಆರಂಭಿಸಿದರು. ಆ) ಬಾಬಾ ಆಮ್ಟೆಯವರು ಮಹಾತ್ಮ ಗಾಂಧೀಜಿಯವರ ನಿಸ್ವಾರ್ಥ ಸೇವಾ ಮನೋಭಾವದಿಂದ ಪ್ರಭಾವಿತರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದುದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಸೇರಿದರು. ೧೯೪೨ ರ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಖಾದಿ ಧರಿಸಿದರು. ತಮ್ಮ ಪಾಲಿನ ಆಸ್ತಿಯನ್ನು ಬಡವರಿಗೆ ಹಂಚಿದರು. ತಮ್ಮ ವಕೀಲಿ ವೃತ್ತಿಯನ್ನು ಸ್ವಯಂ ಇಚ್ಛೆಯಿಂದ ಬಿಟ್ಟುಕೊಟ್ಟರು. ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ಬಾಬಾ ಆಮ್ಟೆರವರು ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾದರು.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XIV.	**ಪತ್ರ ಲೇಖನ ಬರೆಯುವುದು :**	**1 × 5 = 5**
44.	ನಿಮ್ಮನ್ನು ರಾಮನಗರದ ವಿವೇಕಾನಂದ ಬಡಾವಣೆಯಲ್ಲಿ ವಾಸವಿರುವ 'ಮೋಹಿಷ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಗೆ ಸಾರ್ವಜನಿಕ ಶೌಚಾಲಯವನ್ನು ನಿರ್ಮಾಣ ಮಾಡಿ ಕೊಡುವಂತೆ ಕೋರಿ, ನಗರಸಭೆಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.	
	ಅಥವಾ	
	ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕುರಿತು, ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ 'ಜ್ಯೋತಿ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.	
	ವ್ಯಾವಹಾರಿಕ / ಮನವಿ ಪತ್ರ :	
	ಇಂದ, ಗೆ, ಸಂಬೋಧನೆ, ವಿಷಯ	1 ಅಂಕ
	ಪತ್ರದ ಒಡಲು, ವಿಷಯ ನಿರೂಪಣೆ	2 ಅಂಕಗಳು
	ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ	1 ಅಂಕ
	ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ	1 ಅಂಕ
	ಒಟ್ಟು	5 ಅಂಕಗಳು
	ಅಥವಾ	
	ಖಾಸಗಿ / ತಾಯಿಗೆ ಪತ್ರ :	
	ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ	1 ಅಂಕ
	ಪತ್ರದ ಒಡಲು, ವಿಷಯ ನಿರೂಪಣೆ	2 ಅಂಕಗಳು
	ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ	1 ಅಂಕ
	ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ	1 ಅಂಕ
	ಒಟ್ಟು	5 ಅಂಕಗಳು

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XV.	**ಪ್ರಬಂಧ ಬರೆವಣಿಗೆ :**	**1 × 5 = 5**
45.	ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ.	
	ಅಥವಾ	
	ಶಾಲೆಯಲ್ಲಿ ಭಾಷಾ ಸಂಘದ ಕಾರ್ಯ ಚಟುವಟಿಕೆಗಳು.	
	ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ	1 ಅಂಕ
	ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ	2 ಅಂಕಗಳು
	ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ	1 ಅಂಕ
	ಭಾಷಾಶೈಲಿಗೆ, ಪದಬಂಧ	1 ಅಂಕ
	ಒಟ್ಟು	5 ಅಂಕಗಳು